**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ : 971/2018**
**ಚಾಸಾ :- 07 / ಪ್ರಾಸಾ :- 03**

| | |
|---|---|
| ಹೆಸರು | **ಚಂದ್ರಶೇಖರ್** |
| ತಂದೆಯ ಹೆಸರು | **ಮುನಿಯಪ್ಪ** |
| ವಯಸ್ಸು | **30** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

**ದಿನಾಂಕ: 01-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಈಗ ನನಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿ ನನ್ನ ಸಹಿ ಇದೆ. ಸಾಕ್ಷಿಯ ಸಹಿಯನ್ನು ನಿಪಿ-2(ಬಿ ) ಎಂದು ಗುರುತಿಸಲಾಯಿತು. ದಿ.14-12-2017 ರಂದು ರಾತ್ರಿ 8.45 ರಿಂದ 9.30 ರ ಸಮಯಕ್ಕೆ ತಿಪ್ಪಗೊಂಡನಹಳ್ಳಿಯ ರಸ್ತೆಯಲ್ಲಿ ನಿಪಿ-2 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ಇಬ್ಬರು ಅರುಣ್ ಕುಮಾರ್ ಎನ್ನುವವರು ಮತ್ತು ಚಾಸಾ-6 ರವರು ಸಹಿ ಮಾಡಿದ್ದಾರೆ. ಬಸ್ಸು ಮತ್ತು ಮಾರುತಿ-800 ಕಾರಿನ ನಡುವೆ ಅಪಘಾತ ನಡೆದಿರುವ ಬಗ್ಗೆ ಪಂಚನಾಮೆಯನ್ನು ಮಾಡಲಾಗಿರುತ್ತದೆ. ಬಸ್ಸಿನ ಸಂ. ಕೆಎ-09-ಎ-6021 ಆಗಿದೆ. ಮಾರುತಿ-800 ಕಾರಿನ ಸಂ. ಕೆಎ-03-ಪಿ-4731 ಆಗಿದೆ. ಈಗ ನನಗೆ ನಿಪಿ-3 ಮತ್ತು 4 ನ್ನು ತೋರಿಸಿದ್ದು, ಸದರಿ ಫೋಟೋಗಳಲ್ಲಿ ಇರುವ ಕಾರನ್ನು ಪೋಲೀಸರು ಅಮಾನತ್ತು ಮಾಡಿಕೊಂಡಿರುತ್ತಾರೆ. ಈಗ ನನಗೆ ನಿಪಿ-5 ಮುತ್ತ 6 ನ್ನು ತೋರಿಸಿದ್ದು, ಸದರಿ ಫೋಟೋದಲ್ಲಿ ಇರುವ ಬಸ್ಸನ್ನು ಪೋಲೀಸರು ಅಮಾನತ್ತು ಮಾಡಿಕೊಂಡಿರುತ್ತಾರೆ.

**ಪಾಟೀ ಸವಾಲು ಃ- ಆರೋಪಿ ಪರ ಶ್ರೀ. ಜಿ. ಹೆಚ್. ಎಂ , ವಕೀಲರಿಂದ ಃ-**

ನಾನು ನಿಪಿ-2 ಕ್ಕೆ ಪೋ. ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಅಪಘಾತ ನಡೆದ ಸ್ಥಳದಲ್ಲಿ ನಿಪಿ-2 ಕ್ಕೆ ಸಹಿಯನ್ನು ಮಾಡಿದ್ದೇನೆ. ಪೋಲೀಸರು ನನಗೆ ನಿಪಿ-2 ರಂತೆ ಪಂಚನಾಮೆಗೆ ಹಾಜರಿರುವಂತೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನಿಪಿ-2 ಕ್ಕೆ ನಾನು ಸಹಿಯನ್ನು ಮಾಡುವಾಗ ಬೆಳಕು ಇರಲಿಲ್ಲ ಎಂದರೆ ಸರಿ. ನಿಪಿ-2 ರಂತೆ ಪಂಚನಾಮೆ ಮಾಡುವಾಗ ಪೋಲೀಸರು ಮತ್ತು ಸಾರ್ವಜನಿಕರು ಇದ್ದರು. ಸಾರ್ವಜನಿಕರ ಹೆಸರು ಮತ್ತು ಊರು ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ನನ್ನ ಜೊತೆ ಸಹಿ ಮಾಡಿದವರು ತಿಪ್ಪಗೊಂಡನಹಳ್ಳಿ ಗ್ರಾಮದವರು. ನನ್ನ ಸಮಕ್ಷಮದಲ್ಲಿ ಪೋಲೀಸರು ಏನನ್ನೂ ವಶಪಡಿಸಿಕೊಂಡಿಲ್ಲ ಎಂದರೆ ಕಾರು ಮತ್ತು ಬಸ್ಸನ್ನು ವಶಪಡಿಸಿಕೊಂಡರು.

ನನಗೆ ಮಹಜರ್ ಮಾಡಿದ ಸ್ಥಳದ ಚೆಕ್ಕುಬಂಧಿ ಗೊತ್ತು. ಪೂರ್ವಕ್ಕೆ ತಿಪ್ಪಗೊಂಡನಹಳ್ಳಿಯ ರಸ್ತೆ, ಪಶ್ಚಿಮಕ್ಕೆ ಸರ್ಕಾರಿ ಜಾಗ, ಉತ್ತರಕ್ಕೆ ಮಾಗಡಿ ಬೆಂಗಳೂರು ರಸ್ತೆ ಮತ್ತು ದಕ್ಷಿಣಕ್ಕೆ ಮಾಗಡಿಯಿಂದ ತಿಮ್ಮಗಾನಹಳ್ಳಿಗೆ ಹೋಗುವ ರಸ್ತೆ. ನನಗೆ ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ಸ್ವಲ್ಪ ಮಾಹಿತಿ ಇದೆ. ಮೃತ ವ್ಯಕ್ತಿಯು ನನಗೆ ಅಂಕಲ್ ಆಗುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಮೃತ ವ್ಯಕ್ತಿ ನನ್ನ ಅಂಕಲ್ ಆದ ಕಾರಣದಿಂದ ಪೋಲೀಸರು ಹೇಳಿದ ಮೇರೆಗೆ ನಿಪಿ-2 ಕ್ಕೆ ಸಹಿಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ,

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**